# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 4055 (1174) |
| ಸದಸ್ಯರ ಹೆಸರು | ಶ್ರೀ ಸಲೀಂ ಅಹ್ಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ವಿಷಯ | ಕೋವಿಡ್-19 ರ ಕಾಯಿಲೆಯಿಂದ ಮೃತರಾದವರಿಗೆ ಪರಿಹಾರ ನೀಡುವ ಬಗ್ಗೆ |
| ಉತ್ತರಿಸಬೇಕಾದ ದಿನಾಂಕ | 07.03.2022 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |
| **ಪ್ರಶ್ನೆ** | **ಉತ್ತರ** |
| ಅ) ರಾಜ್ಯದ ಹಾವೇರಿ, ಗದಗ ಮತ್ತು ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳಲ್ಲಿ ಕೊರೋನಾ ಸಂದರ್ಭದಲ್ಲಿ ಕೋವಿಡ್-19 ಕಾಯಿಲೆಯಿಂದ ಎಷ್ಟು ಜನ ಮೃತಪಟ್ಟಿದ್ದಾರೆ; (ವಿವರಗಳನ್ನು ನೀಡುವುದು) | ಆರೋಗ್ಯ ಇಲಾಖೆಯ Covid death ಬುಲೆಟಿನ್ ಅನ್ವಯ ದಿನಾಂಕ:03.03.2022 ರವರೆಗೆ ರಾಜ್ಯದ ಹಾವೇರಿ, ಗದಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಒಟ್ಟು 2380 ಕೋವಿಡ್-19 ಮೃತ ಪ್ರಕರಣಗಳು ದಾಖಲಾಗಿರುತ್ತದೆ. ವಿವರ ಕೆಳಕಂಡಂತಿದೆ<br><br># \| ಜಿಲ್ಲೆ \| ಮೃತರ ಸಂಖ್ಯೆ<br>1 \| ಹಾವೇರಿ \| 668<br>2 \| ಗದಗ \| 335<br>3 \| ಧಾರವಾಡ \| 1377<br>ಒಟ್ಟು \| 2380 |
| ಆ) ಈ ಜಿಲ್ಲೆಗಳಲ್ಲಿ ಕೊರೋನಾ ಸಂದರ್ಭದಲ್ಲಿ ವಾರಿಯರ್ಸ್ ಆಗಿ ಕತರ್ವ್ಯ ನಿರ್ವಹಣೆ ಮಾಡಿದವರ ಪೈಕಿ ಕೋವಿಡ್-19 ಕಾಯಿಲೆಯಿಂದ ಎಷ್ಟು ಜನ ಮೃತಪಟ್ಟಿದ್ದಾರೆ; (ವಿವರ ನೀಡುವುದು) | ಹಾವೇರಿ, ಗದಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕೊರೋನಾ ಸಂದರ್ಭದಲ್ಲಿ ವಾರಿಯರ್ಸ್ ಆಗಿ ಕರ್ತವ್ಯ ನಿರ್ವಹಣೆ ಮಾಡಿದವರ ಪೈಕಿ ಕೋವಿಡ್-19 ಕಾಯಿಲೆಯಿಂದ ಒಟ್ಟು 39 ಜನ ಮೃತಪಟ್ಟಿದ್ದಾರೆ. ವಿವರ ಕೆಳಕಂಡಂತಿದೆ.<br><br># \| ಜಿಲ್ಲೆ \| ಮೃತರ ಸಂಖ್ಯೆ<br>1 \| ಹಾವೇರಿ \| 3<br>2 \| ಗದಗ \| 13<br>3 \| ಧಾರವಾಡ \| 23<br>ಒಟ್ಟು \| 39 |
| ಇ) ರಾಜ್ಯ ಸರ್ಕಾರದ ಆದೇಶದಂತೆ ರೂ.1.00 ಲಕ್ಷಗಳ ಪರಿಹಾರವನ್ನು ಹಾವೇರಿ, ಗದಗ ಮತ್ತು ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳಲ್ಲಿ ಎಷ್ಟು ಜನ ಮೃತರ ಕುಟುಂಬಗಳಿಗೆ ನೀಡಲಾಗಿದೆಯೇ; (ಸಂಪೂರ್ಣ ವಿವರಗಳನ್ನು ನೀಡುವುದು) | ರಾಜ್ಯ ಸರ್ಕಾರದ ಆದೇಶದಂತೆ ಬಿ.ಪಿ.ಎಲ್ ಕುಟುಂಬಕ್ಕೆ ನೀಡಲಾದ ಹೆಚ್ಚುವರಿ ರೂ.1.00 ಲಕ್ಷ ಪರಿಹಾರಕ್ಕಾಗಿ ಹಾವೇರಿ, ಗದಗ ಮತ್ತು ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳಲ್ಲಿ ಒಟ್ಟು 1058 ಅರ್ಜಿಗಳು ಸ್ವೀಕೃತವಾಗಿದ್ದು, ಎಲ್ಲಾ 1058 ಅರ್ಜಿದಾರಿಗೆ ರೂ. 1.00 ಲಕ್ಷ ಪರಿಹಾರ ವಿತರಣೆಗೆ ಕ್ರಮಕೈಗೊಳ್ಳಲಾಗಿದೆ. ವಿವರ ಕೆಳಕಂಡಂತಿದೆ<br><br># \| ಜಿಲ್ಲೆ \| ಮೃತರ ಕುಟುಂಬಗಳ ಸಂಖ್ಯೆ<br>1 \| ಹಾವೇರಿ \| 440<br>2 \| ಗದಗ \| 151<br>3 \| ಧಾರವಾಡ \| 467<br>ಒಟ್ಟು \| 1058 |

| | |
|---|---|
| ಈ) ಇನ್ನೂ ನೀಡದಿದ್ದಲ್ಲಿ ಯಾವ ಕಾರಣಕ್ಕಾಗಿ ನೀಡಿರುವುದಿಲ್ಲ; ಯಾವ ಕಾಲಮಿತಿಯಲ್ಲಿ ನೀಡಲಾಗುವುದು? (ವಿವರಗಳನ್ನು ನೀಡುವುದು) | ಕೋವಿಡ್ ಸಾವು ದೃಢಪಟ್ಟಿದ್ದು ಆರೋಗ್ಯ ಇಲಾಖೆಯ ದತ್ತಾಂಶದಲ್ಲಿ ಲಭ್ಯವಿಲ್ಲದ ಪ್ರಕರಣವಾದಲ್ಲಿ State Covid War Room Line List ನಲ್ಲಿ ಸೇರ್ಪಡೆಗೊಳಿಸಿ SDRF ಮಾರ್ಗಸೂಚಿಯನ್ವಯ ಪರಿಹಾರ ಪಾವತಿಸಲು ಸರ್ಕಾರದ ಆದೇಶ ಸಂಖ್ಯೆ: ಕಂಇ 400 ಟಿಎನ್ಆರ್ 2021 ದಿನಾಂಕ:10.01.2022 ರಲ್ಲಿ ಆದೇಶಿಸಲಾಗಿದೆ. ಅಂತೆಯೇ, ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಅಪರ ಜಿಲ್ಲಾಧಿಕಾರಿಗಳ Login ನಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ಹಾವೇರಿ, ಗದಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಒಟ್ಟು 1156 ಪ್ರಕರಣಗಳನ್ನು State Covid War Room Line List ನಲ್ಲಿ ಸೇರ್ಪಡೆಗೊಳಿಸಿದ್ದು, ಈ ಪೈಕಿ ಪರಿಶೀಲಿಸಿ ಜಿಲ್ಲಾಧಿಕಾರಿಗಳು ಅನುಮೋದಿಸಲಾದ 1004 ಪ್ರಕರಣಗಳಿಗೆ ತಲಾ ರೂ.50,000/- ದಂತೆ ಪರಿಹಾರ ವಿತರಣೆಗೆ ಕ್ರಮವಹಿಸಲಾಗಿದೆ. ಉಳಿಕೆ 152 ಪ್ರಕರಣಗಳು ಪರಿಶೀಲನಾ ಹಂತದಲ್ಲಿದ್ದು, ಜಿಲ್ಲಾ ಮಟ್ಟದಲ್ಲಿ ಪರಿಶೀಲಿಸಿ ಅನುಮೋದನೆ ನೀಡಿದ ನಂತರ ಅರ್ಹ ಪ್ರಕರಣಗಳಿಗೆ ಶೀಘ್ರವೇ ಪರಿಹಾರ ವಿತರಿಸಲು ಕ್ರಮವಹಿಸಲಾಗುವುದು. |

ಸಂಖ್ಯೆ : ಡಿಎಸ್‌ಎಸ್‌ಪಿ - ಎಲ್ ಸಿ ಕ್ಯೂ/7/2021

[ಆರ್. ಅಶೋಕ]
ಕಂದಾಯ ಸಚಿವರು